5. ಬೈಲಹೊಂಗಲದಲ್ಲಿ ಸಂಗೊಳ್ಳಿ ರಾಯಣ್ಣನವರ ಮೂರ್ತಿ ಸ್ಥಾಪನೆ.

ಶ್ರೀ ಹೆಚ್. ಶಿವಾನಂದ ಕೌಜಲಗಿ (ಬೈಲಹೊಂಗಲ):- ಸನ್ಮಾನ್ಯ ಅಧ್ಯಕ್ಷರೆ, ಬೈಲಹೊಂಗಲ ನಗರದಲ್ಲಿ ಬ್ರಿಟಿಷರ ಕೂಡ ಹೋರಾಡಿದ ಶೂರ ಸಂಗೊಳ್ಳಿ ರಾಯಣ್ಣನ ಮೂರ್ತಿಯನ್ನು ಕೆಡವಿದ ಬಗ್ಗೆ ಹಾಗೂ ಇನ್ನು ಮುಂದೆ ಹೊಸ ಮೂರ್ತಿಯನ್ನು ಅಲ್ಲಿ ಸ್ಥಾಪಿಸಿ ಕಾಂಪೌಂಡ್ ಗೋಡೆ ಕಟ್ಟುವ ಬಗ್ಗೆ.

ಬೆಳಗಾಂ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಬ್ರಿಟಿಷರ ಕೂಡ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಶೂರ ಸಂಗೊಳ್ಳಿ ರಾಯಣ್ಣನ ಮೂರ್ತಿಯನ್ನು ಕಿತ್ತೂರು ಚೆನ್ನಮ್ಮ ಸಮಾಧಿ ಎದುರಿಗೆ ಇರುವ ಹೂತೋಟದಲ್ಲಿ ಸ್ಥಾಪಿಸಲಾಗಿದೆ. ಈಗ ಕೆಲವು ಕಿಡಿಗೇಡಿಗಳಿಂದ ಆ ಮೂರ್ತಿಯು ಭಿನ್ನಗೊಳಿಸಲ್ಪಟ್ಟಿದೆ ಎಂದು ತಿಳಿದು ಬಂದಿದೆ. ಈ ಭಿನ್ನಗೊಳಿಸಿದ ಮೂರ್ತಿಯನ್ನು ಶಾಂತಿಭಂಗ ಆಗಬಾರೆದಂಬ ಉದ್ದೇಶದಿಂದ ಅಲ್ಲೇ ಇಡಲಾಗಿದೆ ಎಂದು ತಿಳಿದುಬಂದಿದೆ.

ಈ ಭಿನ್ನವಾದ ಮೂರ್ತಿಯನ್ನು ಹಾಗೆ ಪ್ರತಿಷ್ಠಾಪನೆ ಮಾಡಿದ್ದರಿಂದ ಜನರು ಕಂಗಲಾಗಿರುವುದು ಮೊನ್ನೆ ದಿವಸ ಸಾಪರಾರು ಜನರು ಆ ಮೂರ್ತಿಯ ಎದುರು ಕೂಡಲೇ ಸರ್ಕಾರದವರು ಆ ಮೂರ್ತಿಯನ್ನು ತೆಗೆದು ಹೊಸ ಮೂರ್ತಿಯ ಪ್ರತಿಷ್ಠಾಪನೆ ಮಾಡಬೇಕು, ಏಕೆಂದರೆ ಆ ಮೂರ್ತಿ ಭಿನ್ನವಾಗಿದ್ದು ಮತ್ತು ಆ ಮೂರ್ತಿ ಕಾಪಾಡುವ ಸಲುವಾಗಿ ಇನ್ನು ಮುಂದೆ ಇಂಥ ಕೃತ್ಯ ಆಗದಿರಲು ಆ ಜಾಗದ ಸುತ್ತಲು ಕಾಂಪೌಂಡ್ ಗೋಡೆ ಕಟ್ಟಲು ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಪೂರ್ವಕವಾಗಿ ಆಗ್ರಹಪಡಿಸುವೆ ಮತ್ತು ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು, ಬ್ರಿಟಿಷರ ವಿರುದ್ಧ ಹೋರಾಡಿದ ಶೂರ ಸಂಗೊಳ್ಳಿರಾಯಣ್ಣನ ಮೂರ್ತಿಯನ್ನು ಕಾಪಾಡುವುದು ಕನ್ನಡ ಸಂಸ್ಕೃತಿ ಇಲಾಖೆ ಕರ್ತವ್ಯವಾಗಿದೆ. ಆದ ಕಾರಣ ಈ ವಿಷಯದ ಬಗ್ಗೆ ಕನ್ನಡ ಸಂಸ್ಕೃತಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ (ಗಣಿ ಸಚಿವರು ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):-

ಬೈಲಹೊಂಗಲ ನಗರದ ಹೂದೋಟದಲ್ಲಿ ಬ್ರಿಟೀಷರ ಕೂಡ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಶೂರ ಸಂಗೊಳ್ಳಿರಾಯಣ್ಣನ ಮೂರ್ತಿ ಸ್ಥಾಪಿಸಲಾಗಿದ್ದು, ದಿನಾಂಕ: 26-2-1993ರಂದು ರಾತ್ರಿ ನಗರದಲ್ಲಿ ವಿದ್ಯುತ್ ಸರಬರಾಜು ಇಲ್ಲದ ವೇಳೆಯಲ್ಲಿ ಸಂಗೊಳ್ಳಿರಾಯಣ್ಣನ ಮೂರ್ತಿ ಬಿದ್ದಿದೆ ಎಂದು ಪುರಸಭೆಯ ಉಪಾಧ್ಯಕ್ಷರಾದ ಶ್ರೀ ಪಿ.ಎಂ. ಮಾಲಿ ಅವರು ತಿಳಿಸಿರುತ್ತಾರೆ. ಮೂರ್ತಿ ಬೀಳಿಸುವ ಕೃತ್ಯವನ್ನು ಯಾರು ಎಸಗಿದ್ದಾರೆಂದು ಖಚಿತವಾದ ಮಾಹಿತಿ ತಿಳಿದುಬಂದಿಲ್ಲ. ಸದರಿ ಬಿದ್ದ ಮೂರ್ತಿಯ ಬಗ್ಗೆ ಪೋಲಿಸ್ ಇಲಾಖೆಗೆ ಮೌಖಿಕವಾಗಿ ತಿಳಿಸಲಾಗಿದೆಯೆಂದು, ಆ ಮೂರ್ತಿಯನ್ನು ಹಿಂದೆ ಇದ್ದ ಸ್ಥಳದಲ್ಲಿಯೇ ಕೂಡಿಸಲಾಗಿದೆ ಹಾಗೂ ಮೂರ್ತಿ ಭಿನ್ನವಾಗಿರುವುದಿಲ್ಲವೆಂದು ತಿಳಿದುಬಂದಿದೆ.

ಈ ಮೂರ್ತಿಯನ್ನು ಬೀಳಿಸುವ ಕೃತ್ಯದಲ್ಲಿ ಭಾಗಿಯಾಗಿರುವವರ ಹೆಸರು ತಿಳಿದುಬಂದಲ್ಲಿ ಅವರ ಮೇಲೆ ಕಾನೂನಿನ್ವಯ ಕ್ರಮ ತೆಗೆದುಕೊಳ್ಳಲಾಗುವುದು.

(6) ಪೂರ್ವ ಪ್ರಾಥಮಿಕ ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಹಬ್ಬಿರುವ ಡೊನೇಷನ್ ಪಿಡುಗು

ಶ್ರೀ ಜಿ.ಎಸ್. ಆಚಾರ್ (ಬೈಂದೂರು):- ಮಾನ್ಯ ಅಧ್ಯಕ್ಷರೇ, ಮೆಡಿಕಲ್, ಇಂಜಿನಿಯರಿಂಗ್ ಮೊದಲಾದ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಮಾತ್ರವಲ್ಲ ಹೈಸ್ಕೂಲು ಮತ್ತು ಪ್ರಾಥಮಿಕ ಶಾಲೆ, ಪೂರ್ವ